ಎಂ.ವಿ.ಸಿ. ನಂ.519/2023ರಲ್ಲಿ
ಪಿ.ಡಬ್ಲ್ಯೂ-1(ಕೃಷ್ಣಪ್ಪ ಡಿ)

ದಿನಾಂಕ 21-11-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರ ಪರ ಶ್ರೀ ಟಿ ಆರ ಜಿ ವಕೀಲರಿಂದಃ-

ನಾನು 4ನೇ ತರಗತಿವರೆಗೆ ಕಲಿತಿದ್ದೇನೆ. ನನ್ನ ವಾಸ ಕುರುಬರಹಳ್ಳಿ. ನಮ್ಮ ಊರಿನಿಂದ ರಾಮನಗರ ಸರ್ಕಾರಿ ಆಸ್ಪತ್ರೆಗೆ ನಾಲ್ಕು ಕಿ.ಮಿ.ದೂರ ಇದೆ. ನಮ್ಮ ಊರಿನಿಂದ ರಾಮನಗರ ಪೊಲೀಸ್ ಠಾಣೆಗೆ ಆರುವರೆ ಇಂದ ಏಳು ಕಿ.ಮಿ. ದೂರ ಇದೆ. ನಮ್ಮ ಊರಿನಿಂದ ರಾಮನಗರಕ್ಕೆ ಸರ್ಕಾರಿ ಬಸ್ಸುಗಳು, ಆಟೋಗಳುಬರುತ್ತವೆ. ನನ್ನ ಬಳಿ ಸ್ಕೂಟರ ಇಲ್ಲ. ನನ್ನ ಬಳಿ ಅಪಘಾತದ ಕಾಲಕ್ಕೆ ಮೊಬೈಲ್ ಇತ್ತು, ಅದರ ನಂ.9900887886. ನಮ್ಮ ಊರಿನಲ್ಲಿ ನನ್ನನ್ನು ಬಿಟ್ಟು ಮತ್ತೊಬ್ಬರು ಬಸ್ಸು ಹತ್ತಿದರು. ನಾನು ಹತ್ತುವ ಮೊದಲೇ ಸ್ಪೀಡಾಗಿ ಮುಂದೆ ಹೋಯಿತು. ನಾನು ಹತ್ತುವ ಮುಂಚೆ ಬಸ್ಸಿನಿಂದ ಯಾರೂ ಇಳಿಯಲಿಲ್ಲ. ಬಸ್ಸು ನಾನು ಹೇಳಿದಂತೆ ಜೋರಾಗಿ ಹೋಗೇ ಇಲ್ಲ, ಆ ಬಸ್ಸಿನಿಂದ ನನಗೆ ಅಪಘಾತ ಆಗೇ ಇಲ್ಲ ಅಂದರೆ ಸರಿಯಲ್ಲ.

ಅಪಘಾತ ಆದಾಗ ಸ್ಥಳಕ್ಕೆ ಎಷ್ಟು ಜನ ಬಂದರು ಅಂರೆ ಸಾಕ್ಷಿ ಬಿದ್ದ ನಂತರ ನನಗೆ ಪ್ರಜ್ಞೆ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಎರಡು ಮೂರು ಗಂಟೆಗೆ ನನಗೆ ಪ್ರಜ್ಞೆ ಬಂತು. ನನಗೆ ಮದುವೆ ಆಗಿದೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.